ಉತ್ತರ ಕನ್ನಡ ಜಿಲ್ಲೆಯಲ್ಲಿ ನೌಕಾಂಗಣ ಯೋಜನೆ

೧೪೫೩. ಶ್ರೀ ಜಿ. ಎಸ್. ಹೆಗಡೆ ಅಜ್ಜಿಬಾಳ (ಅಂಕೋಲ).— ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದಿಂದ ಅಂಗೀಕೃತವಾದ ನೌಕಾಂಗಣವನ್ನು ಕಟ್ಟಲು ಮತ್ತು ಅದನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಕಾರವಾರ ಮತ್ತು ಅಂಕೋಲಾ ತಾಲ್ಲೂಕಿನಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಕಾರವಾರ ಮತ್ತು ಅಂಕೋಲಾ ತಾಲ್ಲೂಕಿನಲ್ಲಿ ತೊಂದರೆಗಳಿಗೊಳಗಾಗುವ ಜನರೆಷ್ಟು ?

ಇ) ಜಮೀನು ಮತ್ತು ಪರಿಹಾರ ಧನವನ್ನು ಸರ್ಕಾರವು ತೊಂದರೆಗಳಿಗೊಳಗಾದ ಜನರಿಗೆ ಕೊಡುತ್ತದೆಯೇ ?

ಈ) ಪರಿಹಾರ ಹಣವನ್ನು ಯೋಜನೆಯ ಖರ್ಚಿನಲ್ಲಿ ಭರಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರವನ್ನು ಕೇಳಿದೆಯೇ ?

ಉ) ಯೋಜನೆಯ ಕೆಲಸವನ್ನು ಪ್ರಾರಂಭಿಸುವ ಮುನ್ನ ತೊಂದರೆಗೀಡಾದವರಿಗೆ ಪುನರ್ವಸತಿಯ ಸೌಕರ್ಯವನ್ನು ಕಲ್ಪಿಸಲಾಗುತ್ತದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಅನಧಿಕೃತವಾಗಿ ನೌಕಾಂಗಣವನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲು ಕೇಂದ್ರ ಸರಕಾರವು ಒಪ್ಪಿದೆ. ಈ ಯೋಜನೆಗೆ ಬೇಕಾದ ಭೂಮಿಯ ಆಯ್ಕೆಯ ವಿಷಯವು ಕೇಂದ್ರ ಸರಕಾರ/ನೌಕಾಧಿಕಾರಿಗಳೊಡನೆ ಸಮಾಲೋಚನೆಯಲ್ಲಿದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಸರ್ಕಾರಿ ಭೂಮಿಯು ಕೊರತೆಯಿರುವುದರಿಂದ ನಿರಾಶ್ರಿತರಿಗೆ ಬದಲಿ ಜಮೀನು ಕೊಡುವುದನ್ನು ಕಾರ್ಯಗತ ಮಾಡುವುದು ಕಷ್ಟವು ಆಲ್ಲದೆ, ಅರಣ್ಯ ಭೂಮಿಯನ್ನು ವ್ಯವಸಾಯಕ್ಕೆ ಸಾಗುವಳಿ ಮಾಡಲು ಅರಣ್ಯ ಸಂಪತ್ತನ್ನು ಸಂರಕ್ಷಣೆಯ ಪ್ರಯುಕ್ತ ಕೊಡುವುದು ಸರಿಯಾಗುವುದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದ ಜೊತೆ ಪುನರ್ವಸತಿಯ ಖರ್ಚನ್ನು ಯೋಜನೆಯ ಖರ್ಚಿನಲ್ಲಿ ಸೇರಿಸಲು ಮಾತುಕತೆ ನಡೆಯುತ್ತಿದೆ.

ಈ) ಭೂ ಸ್ವಾಧೀನಪಡಿಸಿಕೊಳ್ಳುವ ಜಮೀನುಗಳ ಪರಿಹಾರ ಧನವು ಯೋಜನೆ ಖರ್ಚಿನಲ್ಲಿ ಭರಿಸಲಾಗುವುದು.

ಉ) ಮೇಲೆ ಸೂಚಿಸಿರುವಂತೆ ಪುನರ್ವಸತಿಯ ಬಗ್ಗೆ ಕೇಂದ್ರ ಸರ್ಕಾರದೊಡನೆ ಮಾತುಕತೆ ನಡೆಯುತ್ತಿದೆ.

ವರಾಹಿ ಯೋಜನೆಯಡಿಯಲ್ಲಿ ಮುಳುಗಡೆಯಾದ ರೈತರ ಜಮೀನುಗಳಿಗೆ ಪರಿಹಾರ ಧನ

೧೯೭೩. ಶ್ರೀ ಕಟ್ಟಮನಿ ರತ್ನಾಕರ (ತೀರ್ಥಹಳ್ಳಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವರಾಹಿ ಮುಳುಗಡೆ ರೈತ ಕುಟುಂಬಗಳಿಗೆ ಪರಿಹಾರದ ಹಣ ಪಡೆಯಲು ವಿಳಂಬವಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ತ್ವರಿತವಾಗಿ ಪರಿಹಾರ ಒದಗಿಸಲು ಕೈಕೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು.—

ಅ) ಹೌದು.

ಅ) ಪರಿಹಾರ ಹಣವನ್ನು ಕೊಡಲು ಭೂಸ್ವಾಧೀನ ಪಡಿಸಿಕೊಳ್ಳುವ ಇಲಾಖೆಯಾದ ಕರ್ನಾಟಕ ವಿದ್ಯುತ್ ನಿಗಮ ಇವರಿಗೆ ಹಣ ಬಿಡುಗಡೆ ಮಾಡಲು ಕೋರಲಾಗಿದೆ. ಹಣ ಬಿಡುಗಡೆಯಾದ ಕೂಡಲೇ ಪರಿಹಾರ ಹಣವನ್ನು ಹಂಚಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿಯ ಎಲ್ಲಾ ಗ್ರಾಮಗಳ ಬೀದಿ ದೀಪದ ಹಣವನ್ನು ವಿದ್ಯುಚ್ಛಕ್ತಿ ಮಂಡಳಿಗೆ ಪಾವತಿ ಮಾಡುವ ಬಗ್ಗೆ

೧೬೯೯ (೫). ಶ್ರೀ ಬಿ. ನಂಜಯ್ಯನಮಠ್ (ಗುಳೇದಗುಡ್ಡ).—ಮಾನ್ಯ ವಿದ್ಯುಚ್ಛಕ್ತಿ ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿಯ ಎಲ್ಲಾ ಗ್ರಾಮಗಳ ಬೀದಿ ದೀಪಗಳಿಗೆ ಖರ್ಚಾಗುವ ವೆಚ್ಚವೆಷ್ಟು ?

ಆ) ೧೯೮೨ಕ್ಕಿಂತಲೂ ಮುಂಚೆ ಇದ್ದ ಬಾಕಿಗೂ ಈಗಿನ ಸರ್ಕಾರವೇ ಹೊಣೆಯೇ?

ಇ) ಇನ್ನು ಮುಂದೆ ಆಯಾ ಗ್ರಾಮಗಳ ಬೀದಿ ವಿದ್ಯುತ್ ದೀಪಗಳ ಬಿಲ್ಲನ್ನು ಆಯಾ ಪಂಚಾಯಿತಿಯ ಬದಲು ಸರ್ಕಾರವೇ ತುಂಬುವುದೆ ?

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ರಾಜ್ಯದಲ್ಲಿ ವಿದ್ಯುದ್ದೀಕರಣವಾಗಿರುವ ಗ್ರಾಮ ಮತ್ತು ಪುರ ಪಂಚಾಯಿತಿಗಳಲ್ಲಿರುವ ಬೀದಿ ದೀಪದ ವಿದ್ಯುತ್ ಬಳಕೆಯ ಹಣ ೧೯೮೪-೮೫ನೇ ಸಾಲಿನಲ್ಲಿ ಸುಮಾರು ೫.೧೨ ಕೋಟಿರೂಪಾಯಿಗಳು.

ಆ) ೧೯೮೨ ಕ್ಕಿಂತ ಮುಂಚಿನ ಬಾಕಿಯನ್ನು ಸರ್ಕಾರವೇ ಕೊಡಬೇಕೆಂ ಏಕೆಂದರೆ ಸರ್ಕಾರವು ನಿರಂತರ ಅಸ್ತಿತ್ವದಲ್ಲಿರುತ್ತದೆ, ಕಾಲವು ೧೯೮೨ಕ್ಕೆ ಮುಂಚಿನದೋ ಅಥವಾ ನಂತರದೋ ಎಂಬುದು ಗಣನೆಗೆ ಬರುವುದಿಲ್ಲ.

ಇ) ಮಂಡಲ ಪಂಚಾಯಿತ್ ಮತ್ತು ಜಿಲ್ಲಾ ಪರಿಷತ್ತುಗಳ ರಚನೆಯಾದ ನಂತರ ಈಗಿನ ನೀತಿಯನ್ನು ಬದಲಾಯಿಸುವ ಬಗ್ಗೆ ಪರಿಶೀಲಿಸಲಾಗುವುದು.

ವಂಧ್ಯದ ಅಂಗಡಿಗಳಿಗೆ ಮಂಜೂರಾತಿ

೧೬೭೨. ಶ್ರೀಮತಿ ಶಿವಕಾಂತ ಚಿತ್ತರೆ(ಹುಲ್ಸೂರು).—ಮಾನ್ಯ ಅಬ್ಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫-೮೬ರಲ್ಲಿ ಬೀದರ್ ಜಿಲ್ಲೆಯಲ್ಲಿ ಎಷ್ಟು ಮಧ್ಯದ ಅಂಗಡಿಗಳಿಗೆ ಮಂಜೂರಾತಿ ನೀಡಲಾಗಿದೆ ?

ಶ್ರೀ ರಮೇಶ್ ಕೆ. ಜಿಗಜಿಣಗಿ (ಅಬ್ಕಾರಿ ರಾಜ್ಯ ಸಚಿವರು).—

ಅ) ೧೯೮೫-೮೬ನೇ ಸಾಲಿನಲ್ಲಿ ೪೮ (ಸಿ ಎಲ್. ೨) ಮದ್ಯದ ಅಂಗಡಿಗಳಿಗೆ ಪರವಾನಗಿ ಕೊಡಲಾಗಿದೆ (೧-೭-೮೫ ರಿಂದ ೩೧-೧೨-೮೬ರವರೆಗೆ).

ಚನ್ನಪಟ್ಟಣ ತಾಲ್ಲೂಕಿನಲ್ಲಿ ಹಳ್ಳಿಗಳಿಗೆ ವಿದ್ಯುತ್ ಬೀದಿ ದೀಪಗಳನ್ನು ಒದಗಿಸುವ ಬಗ್ಗೆ

೧೬೪೨. ಶ್ರೀ ಎಂ. ವರದೇಗೌಡ (ಚನ್ನಪಟ್ಟಣ).—ವಿದ್ಯುಚ್ಛಕ್ತಿ, ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚನ್ನಪಟ್ಟಣ ತಾಲ್ಲೂಕಿನ ಎಷ್ಟು ಹಳ್ಳಿಗಳಿಗೆ ೧೯೮೩ ರಿಂದ ಇಲ್ಲಿಯವರೆಗೆ ಬೀದಿ ದೀಪಕ್ಕಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ;

ಆ) ಈ ತಾಲ್ಲೂಕಿನಲ್ಲಿ ಬೀದಿ ದೀಪಕ್ಕೆ ವಿದ್ಯುಚ್ಛಕ್ತಿಯನ್ನು ಇನ್ನೂ ಎಷ್ಟು ಹಳ್ಳಿಗಳಿಗೆ ಒದಗಿಸಬೇಕಾಗಿದೆ;

ಇ) ಇದನ್ನು ಎಷ್ಟು ಸಮಯದಲ್ಲಿ ಒದಗಿಸಲಾಗುವುದು;